## ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಮತ್ತು ಕರ್ನಾಟಕ ಕೃಷಿ ಇಲಾಖೆ

## ಸಮಗ್ರ ಕೃಷಿ ಹವಾಮಾನ ವಿಭಾಗ

## ಕೃಷಿ ಹವಾಮಾನ ವಿಭಾಗ, ಜಿ.ಕೆ.ವಿ.ಕೆ, ಬೆಂಗಳೂರು–೬೫

## ಮಾಯಸಂದ್ರ ಹೋಬಳಿಯ ಕೃಷಿ ಹವಾಮಾನ ಮುನ್ಸೂಚನೆ

ದಿನಾಂಕ: 22.11.2013

ಈ ವಾರದ ಮುನ್ಸೂಚನೆ (ದಿನಾಂಕ 23-11-13 to 27.11.13 ವರೆಗೆ)

| ನಿಯತಾಂಕಗಳು | 23/11/13 | 24/11/13 | 25/11/13 | 26/11/13 | 27/11/13 |
|---|---|---|---|---|---|
| ಮಳೆ (ಮಿ ಮಿ) | 0 | 0 | 0 | 4 | 3 |
| ಗರಿಷ್ಠ ಉಷ್ಣಾಂಶ(ಡಿ.ಸೆ.) | 29 | 30 | 29 | 30 | 29 |
| ಕನಿಷ್ಠ ಉಷ್ಣಾಂಶ (ಡಿ.ಸೆ.) | 16 | 15 | 15 | 15 | 16 |
| ಮೋಡ (ಪ್ರಮಾಣ) | 3 | 3 | 3 | 4 | 3 |
| ಅರ್ದ್ರತೆ ೭.೨೦ ಬೆ (ಶೇ) | 60 | 72 | 69 | 64 | 64 |
| ಅರ್ದ್ರತೆ ೨.೨೦ ಮ (ಶೇ) | 33 | 38 | 43 | 46 | 41 |
| ಗಾಳಿಯ ವೇಗ (ಕಿ.ಮಿ/ಗಂಟೆಗೆ) | 3 | 2 | 2 | 3 | 4 |
| ಗಾಳಿಯ ದಿಕ್ಕು (ಡಿಗ್ರಿ) | 70 | 90 | 80 | 100 | 80 |

ಈ ವಾರದ ಮುನ್ಸೂಚನೆಯ ಪ್ರಕಾರ ಮುಂದಿನ ಐದು ದಿನಗಳ ಸಮೀಕ್ಷೆಯ ಪ್ರಕಾರ ಎರಡು ಅಥವಾ ಮೂರು ದಿನಗಳ ನಂತರ ಅಂದರೆ ಸೋಮವಾರದ ನಂತರ ಮೋಡ ಕವಿದ ವಾತಾವರಣ ಅಥವಾ ಹಗುರವಾದ ಜಡಿ ಮಳೆ ಆರಂಭವಾಗುವ ಲಕ್ಷಣ ಕಂಡುಬಂದಿದೆ. ಉಳಿದಂತೆ ಶನಿವಾರ ಹಾಗೂ ಭಾನುವಾರ ಒಣಹವೆ ಮುಂದುವರಿಯಲಿದೆ. ದಿನದ ಗರಿಷ್ಠ ಉಷ್ಣಾಂಶವು 29.0-30.0$^{o}$C ಮತ್ತು ಕನಿಷ್ಠ 15-16$^{o}$C ಇರಲಿದೆ. ಬೆಳಿಗಿನ ಅರ್ದ್ರತೆ ಪ್ರಮಾಣ ಶೇ 60-72 % ಇದ್ದು, ಮಧ್ಯಾಹ್ನ 33-46% ಇರುವುದು ಮತ್ತು ಗಾಳಿಯು ಈಶಾನ್ಯ ದಿಕ್ಕಿನಿಂದ ಗಂಟೆಗೆ ಸರಾಸರಿ 2-4 ಕಿ.ಮೀ. ವೇಗದಲ್ಲಿ ಬೀಸುವ ಸಂಭವವಿದೆ.

### ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

- ಮುಂದಿನ ಎರಡು ಮೂರು ದಿನಗಳು ಮಳೆಯು ಇಲ್ಲದಿರುವುದರಿಂದ ಕಟಾವಿಗೆ ಸೂಚಿಸಲಾಗಿದೆ ಕಟಾವಿಗೆ ಬಂದಿರುವ ನೆಲೆಗಡಲೆ ಮತ್ತು ಮೆಕ್ಕೆಜೋಳ ಹಾಗೂ ರಾಗಿಯನ್ನು ಕಟಾವು ಮಾಡಬಹುದು.
- ದನಕರುಗಳಿಗೆ ಕಾಲುಬಾಯಿ ರೋಗ ಕಂಡುಬಂದಿರುವುದರಿಂದ ಮುನ್ನೆಚ್ಚರಿಕೆ ಕ್ರಮವಹಿಸಿ ಲಸಿಕೆ ಹಾಕಿಸುವುದು.
- ರಾಗಿಯಲ್ಲಿ ಬೆಂಕಿರೋಗವಿರುವುದು ಕಂಡುಬಂದಿದೆ ಆದ್ದರಿಂದ ರೋಗ ಬಂದಿರುವ ಕಡೆ ಬಾವಿಸ್ಟಿನ್ ಶಿಲಿಂದ್ರನಾಶಕವನ್ನು 1 ಗ್ರಾಂ ಪ್ರತಿ ಲೀ. ನೀರಿಗೆ ಬೆರೆಸಿ ಸಿಂಪಡಿಸವುದು ಒಳ್ಳೆಯದು.
- ನೆಲೆಗಡಲೆಗೆ ಬೆಳೆಯಲ್ಲಿ ಎಲೆಚುಕ್ಕೆ ರೋಗ (ಟಿಕ್ಕಾ) ಬರುವ ಲಕ್ಷಣಗಳಿರುವುದರಿಂದ ಕಾರ್ಬೆಂಡೈಜಿಮ್ ಶಿಲಿಂದ್ರನಾಶಕವನ್ನು 1 ಗ್ರಾಂ ಪ್ರತಿ ಲೀ. ನೀರಿಗೆ ಬೆರೆಸಿ ಸಿಂಪಡಿಸಲು ಸೂಚಿಸಲಾಗಿದೆ.
- ತೊಗರಿಯಲ್ಲಿ ಕಾಯಿ ಕೊರೆಯುವ ಹುಳು ಕಂಡುಬಂದಲ್ಲಿ ಲ್ಯಾನೇಟ್ (ಮಿಥೊಮಿಲ್) (1 ಗ್ರಾಂ ಪ್ರತಿ ಲೀ. ನೀರಿಗೆ ಬೆರೆಸಿ) ಸಿಂಪಡಿಸಲು ಸೂಚಿಸಲಾಗಿದೆ. ಇದಲ್ಲದೇ, ಫ್ಲಾಶ್ ಅಥವಾ ಎಕಾಲಕ್ಸ್ (2 ಮಿ.ಲೀ. ಪ್ರತಿ ಲೀ. ನೀರಿಗೆ ಬೆರೆಸಿ) ಸಿಂಪಡಿಸಲು ಸೂಚಿಸಲಾಗಿದೆ.
- ಹೂ ಕೋಸು ಹಾಗೂ ಎಲೆ ಕೋಸುವಿನಲ್ಲಿ ಎಲೆ ತಿನ್ನುವ ಹುಳು (ಡೈಮಂಡ್ ಬ್ಯಾಕ್ ಮಾತ್):
- ಇವುಗಳನ್ನು ಹತೋಟಿ ಮಾಡಲು ಕ್ವಿನಾಲ್ಫಾಸ್ ಅಥವಾ ಕ್ಲೋರೊಪೈರಿಫ್ಲಾಸ್ ಅನ್ನು 2.5 ಮಿ.ಲೀ. ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸುವುದು ಸೂಕ್ತ.

ನೋಡಲ್ ಅಧಿಕಾರಿ:
ಡಾ.ಎಮ್.ಬಿ. ರಾಜೇಗೌಡ
ಬೆಂಗಳೂರು